## ನಿಮಗೆಷ್ಟು ಗೊತ್ತು

# ಮರಕ್ಕೆ ಮಾರಕವಲ್ಲ ಅಪ್ಪುಗಿಡ

ಅಪ್ಪುಗಿಡ ಮಣ್ಣ ಮೇಲೆ ಬೇರು ಊರಿ ನಿಲ್ಲುವ ಗಿಡವಲ್ಲ. ಅದರ ಆಶ್ರಯಕ್ಕೆ ಅಟ್ಟಣಿಗೆಯೇ ಆಗಬೇಕು. ಗಿಡ, ಮರ, ಕುರುಚಲು ಸಸ್ಯವಾದರೂ ಅಡ್ಡಿಯಿಲ್ಲ. ಮನೆಯ ಚಾವಣಿಯಾದರೂ ಸರಿ. ಹಾಗೆಂದು ಇದು ಪರಾವಲಂಬಿ ಸಸ್ಯವೂ ಅಲ್ಲ. ಆಶ್ರಯ ನೀಡಿದ ಮರ ಗಿಡಗಳಿಗೆ ಕಂಟಕವನ್ನು ಉಂಟು ಮಾಡದಂತೆ ಸ್ವಾವಲಂಬನೆಯಿಂದ ಬದುಕುತ್ತದೆ.

ಮತ್ತೊಬ್ಬರಿಗೆ ತೊಂದರೆ ಕೊಡದೆ ಅಪ್ಪುಗೆಯ ಬೆಸುಗೆಯಲ್ಲಿ ಬೆಳೆಯುವ ಅಪ್ಪುಗಿಡವನ್ನು ಎಪಿಫೈಟ್ (Epiphyte) ಎಂದು ಇಂಗ್ಲಿಷ್‌ನಲ್ಲಿ ಕರೆಯುತ್ತಾರೆ. ಇಂತಹ ಸಸ್ಯಗಳಿಗೆ ಪೋಷಕಾಂಶ ಎಲ್ಲಿಂದ ಸಿಗುತ್ತದೆ ಎನ್ನುವ ಪ್ರಶ್ನೆ ಏಳುತ್ತದೆ. ಇವು ವಾತಾವರಣದ ಗಾಳಿ– ದೂಳನ್ನು ಬಳಸಿ ಬದುಕುತ್ತವೆ.



ಅಪ್ಪುಗಿಡ ಜಾತಿಗೆ ಸೇರಿದ ಸಸ್ಯಗಳು ಆಶ್ರಯ ನೀಡುವ ಮರಗಳ ತೊಗಟೆಯ ಮೇಲೆ ಬೀಳುವ ದೂಳಿನಿಂದಲೇ ಆಹಾರವನ್ನು ಹೀರಿಕೊಳ್ಳುತ್ತವೆ. ಗಾಳಿಯಲ್ಲಿ ಇರುವ ತೇವಾಂಶವನ್ನೇ ಬಳಸಿಕೊಳ್ಳುತ್ತವೆ. ಬೇರುಗಳು ಅದಕ್ಕೆ ಅನುಕೂಲವಾಗುವಂತೆ ರಚನೆಯಾಗಿವೆ.

ಸಾಧಾರಣವಾಗಿ ಅಪ್ಪುಗಿಡಗಳು ಅಲ್ಲೊಂದು ಇಲ್ಲೊಂದು ಮರಗಿಡಗಳ ಮೇಲೆ ಬೆಳೆಯುವಂತೆ ಕಂಡುಬಂದರೂ ಉಷ್ಣವಲಯದ ಅರಣ್ಯಪ್ರದೇಶಗಳಲ್ಲಿ ಹೆಚ್ಚಾಗಿರುತ್ತವೆ. ಇವುಗಳಲ್ಲಿ ಮೂರು ವಿಧಗಳಿವೆ. ಇದೇ ಜಾತಿಯ ಸಸ್ಯಗಳನ್ನು ನೋಡಿಯೇ ಗೃಹಾಲಂಕಾರ ಸಸ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

★ ಗೌತಮ

---

# ಮರ ಕಡಿಯುವವನ ಉಪಾಯ



ಬಹಳ ಕಾಲದ ಹಿಂದೆ ಒಂದು ಕಾಡಿನಲ್ಲಿ ಒಂದು ಸಿಂಹ ವಾಸವಾಗಿತ್ತು. ಅದು ಅತ್ಯಂತ ಬಲಿಷ್ಠ ಸಿಂಹವಾಗಿದ್ದು ಸುಂದರವಾಗಿಯೂ ಇತ್ತು. ಆ ಕಾಡಿಗೆ ಒಬ್ಬ ಮರ ಕಡಿಯುವವನು ಪ್ರತಿ ದಿನ ಬಂದು ಮರ ಕಡಿದುಕೊಂಡು ಹೋಗಿ ಕಟ್ಟಿಗೆಯನ್ನು ಮಾರಿ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದ. ಹಾಗೆ ಅವನು ಕಾಡಿಗೆ ಬರುವಾಗ ಜೊತೆಯಲ್ಲಿ ತನ್ನ ಮಗಳನ್ನೂ ಕರೆದುಕೊಂಡು ಬರುತ್ತಿದ್ದ. ಅವಳ ಹೆಸರು ಸೌಂದರ್ಯ. ಹೆಸರಿಗೆ ತಕ್ಕ ಹಾಗೆ ಅವಳು ತುಂಬಾ ರೂಪವತಿಯಾಗಿಯೂ ಇದ್ದಳು. ಅವಳನ್ನು ನೋಡಿದ ಸಿಂಹಕ್ಕೆ ಏನಾದರೂ ಮಾಡಿ ಅವಳನ್ನು ಮದುವೆಯಾಗುವ ಉತ್ಕಟ ಹಂಬಲ ಉಂಟಾಯಿತು.

ಮಾರನೆಯ ದಿನವೇ ಅದು ಮರ ಕಡಿಯುವವನ ಬಳಿಗೆ ಹೋಗಿ 'ಅಯ್ಯಾ! ನಾನು ನಿನ್ನ ಮಗಳನ್ನು ನೋಡಿದ್ದೇನೆ. ಅವಳು ತುಂಬಾ ಸುಂದರವಾಗಿದ್ದಾಳೆ. ನಾನು ಅವಳನ್ನು ಮದುವೆಯಾಗಬೇಕೆಂದಿದ್ದೇನೆ. ಏನು ಹೇಳುವಿ?' ಎಂದು ಕೇಳಿತು. ಮರ ಕಡಿಯುವವನಿಗೆ ಉಭಯ ಸಂಕಟ. ಸಿಂಹಕ್ಕೆ ಮಗಳನ್ನು ಮದುವೆ ಮಾಡಿಕೊಡಲಾಗುತ್ತದೆಯೇ? ಇಲ್ಲವೆಂದರೆ ಸಿಂಹ ಬಿಡುವುದಿಲ್ಲ. ಕೊನೆಗೆ ಅವನು ಸಿಂಹವನ್ನು ಕುರಿತು– 'ಎಲೈ ಸಿಂಹರಾಜನೇ! ನನಗೂ ನನ್ನ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡಿಕೊಡಬೇಕೆಂಬ ಆಸೆಯಿದೆ. ಆದರೇನು ಮಾಡುವುದು? ನನ್ನ ಮಗಳಿಗೆ ನಿನ್ನ ಕೋರೆಹಲ್ಲು ಹಾಗೂ ಚೂಪಾದ ಉಗುರುಗಳನ್ನು ಕಂಡರೆ ವಿಪರೀತ ಹೆದರಿಕೆ. ಹೀಗಿರುವಾಗ ಅವಳನ್ನು ನಿನಗೆ ಕೊಟ್ಟು ಹೇಗೆ ಮದುವೆ ಮಾಡಿಕೊಡಲಿ? ಒಂದು ಕೆಲಸ ಮಾಡು. ನೀನು ನಿನ್ನ ಹಲ್ಲುಗಳನ್ನು ಕಿತ್ತಿಸಿಕೊಂಡು, ಉಗುರುಗಳನ್ನು ಕತ್ತರಿಸಿಕೊಂಡು ಬಾ. ಆಗ ಮದುವೆ ಮಾಡಿಕೊಡುತ್ತೇನೆ' ಎಂದ. ಅವನ ಮಾತನ್ನು ನಂಬಿದ ಸಿಂಹ ಅವನು ಹೇಳಿದ ಹಾಗೆಯೇ ಹಲ್ಲುಗಳನ್ನು ಕಿತ್ತಿಸಿಕೊಂಡು ಉಗುರುಗಳನ್ನು ಕತ್ತರಿಸಿಕೊಂಡು ಬಂದಿತು. ಕೂಡಲೇ ಅವನು ಒಂದು ದೊಡ್ಡ ದೊಣ್ಣೆಯಿಂದ ಆ ಸಿಂಹಕ್ಕೆ ದನಕ್ಕೆ ಬಡಿಯುವಂತೆ ಚೆನ್ನಾಗಿ ಹೊಡೆದು ಆ ಕಾಡಿನಿಂದ ಓಡಿಸಿಬಿಟ್ಟ. ಹೀಗೆ ಅವನು ತಾನು ಮಾಡಿದ ಉಪಾಯದಿಂದ ತನಗೊದಗಿದ್ದ ಗಂಡಾಂತರದಿಂದ ಪಾರಾದ.

-ಎಂ.ಕೆ. ಮಂಜುನಾಥ್, ಬೆಂಗಳೂರು